ಉಕ್ಕಿನಲ್ಲಿ ಎರಕಹೊಯ್ದಂತೆ ಏಣುಗಳು ಒಂದರಪಕ್ಕ ಒಂದು ಶಿಸ್ತಿಂದ ಸಾಲುಗಟ್ಟಿದ್ದವು. ಬೇರೆಬೇರೆ ಗಾತ್ರದ, ಆಕಾರದ ಉಳಿಗಳನ್ನು ಬದಲಿಸುತ್ತ, ಸುತ್ತಿಗೆಯೇಟಿನ ಹದವನ್ನು ನಿಯಂತ್ರಿಸುತ್ತಾ, ಕಾಷ್ಠಶಿಲ್ಪಿಯನ್ನು ಆವಾಹಿಸಿಕೊಂಡವನನ್ನು ನೋಡುತ್ತ ಕುಳಿತವರಿಗೆ ನಡು ಮಧ್ಯಾಹ್ನವಾದದ್ದು ತಿಳಿಯಲಿಲ್ಲ. ನಾಲ್ಕುದಿನ ಹಗಲಿರುಳು ತಪಸ್ಸಿಗೆ ಕುಳಿತಂತೆ ಸ್ಥಾಪಿತನಾದ ಮುತ್ತಾಚಾರಿ ಕೈಯಲ್ಲಿ ಮೂರು ಕಣೆಗಳು ಜನ್ಮತಾಳಿದ್ದವು. ಮುದ್ದಳ್ಳಿ ಕಮ್ಮಾರನಲ್ಲಿ ಹೋಗಿ ಅವನೇ ಹಾಕಿಟ್ಟುಕೊಂಡ ವಿನ್ಯಾಸ, ಅಳತೆಯಲ್ಲಿ ಕಬ್ಬಿಣದ ಪಟ್ಟಿಗಳು ಅವಕ್ಕೆ ರಂಧ್ರಗಳನ್ನು ಮಾಡಿಸಿಕೊಂಡು ತಂದ. ಪೇಟೆಯಿಂದ ನಟ್ಟು ಬೋಲ್ಟುಗಳನ್ನು ತಂದರು. ಈಗ ಕೋಣ ಬೇಕಿತ್ತು. ಸುಲಭದ್ದಾಗಿರಲಿಲ್ಲ. ಘಟ್ಟದ ಕೆಳಗೆ ಹೋಗಿ ಪರಿಚಯದವನೊಬ್ಬನನ್ನೊಪ್ಪಿಸಿ ಮೂರನೇದಿನ ಕರೆತಂದೇಬಿಟ್ಟ ಮುತ್ತಾಚಾರಿ. ಇದ್ದವರ ಮನೆಗಳಿಂದ ಕೊಪ್ಪರಿಗೆ, ಬಾನಿ ಒಟ್ಟುಮಾಡಿದರು. ಹೊಸ ತಗಡಿನಲ್ಲಿ ಪಾಕದಮರಿಗೆ ಮಾಡಿಸಿದರು. ಗದ್ದೆಯಂಚಿನಲ್ಲಿ ಅಡಕೆಸೋಗೆ ಚಪ್ಪರ ಹಾಕಿ, ಒಲೆ ತೋಡಿ, ಪಾಕದಮರಿಗೆಗೆ, ಹಾಲಿನ ಬಾನಿಗೆ ಹೊಂಡ ತೆಗೆದರು. ಯಾರ ಮಾತೂ ಕೇಳದ, ಚಿಕ್ಕಮಕ್ಕಳಂತೆ ಹಟಕ್ಕೆ ಬಿದ್ದವರೆದುರು ಗೌರಕ್ಕ ಏನಾದರು ಮಾಡಿಕೊಳ್ಳಲಿ ಅನ್ನುವ ಮನಃಸ್ಥಿತಿಗೆ ಬಂದು ನೋಡುತ್ತ ಕುಳಿತಳು. ಅಶ್ವಮೇಧ ಯಾಗಕ್ಕೆ ತಯಾರಿಮಾಡುತ್ತಿರುವ ಮಟ್ಟದ ಇವರ ಚಲನವಲನ ನಿಧಾನವಾಗಿ ಹೊರಗೆ ಗೊತ್ತಾಗುತ್ತ ಅತ್ತಿತ್ತಲ ಊರುಗಳಿಗೂ ಪಸರಿಸಿತು. 'ಈಗಿನ ಜನ ಎಲ್ಲಾ ಕೆಲಸಾನ ಆದಷ್ಟೂ ಹಗುರ ಮಾಡಕೊಳಕ್ಕೆ ಉಪಾಯ ಹುಡುಕ್ತಿರಬೇಕಾದ್ರೆ... ಮಾರಾಯರೆ ಒಳ್ಳೆ ಗುಡ್ಡ ಕಡದು ಮೈಮೇಲೆ ಕೆಡಕ್ಕೊಳ್ಳೊ ಕೆಲಸ, ಎಂತಾ ಹುಚ್ಚೆದು ಅದೂ ಈ ಪ್ರಾಯ್ದಲ್ಲಿ!' ಅಂದರು ಗೌಡರು. 'ಅವರಿಗೆ ಸಮನಾಗಿ, ಗಾದೆ ಉಂಟಲ್ಲ—ಕಸುಬಿಲ್ದ ಆಚಾರಿ ಅದೇನೋ ಮಾಡಿದ್ನಂತೆ ಹಾಗೆ ಮುತ್ತಾಚಾರಿ ಜುಗಲ್ಬಂದಿ' ನಗಾಡಿದ ಜುಂಜ ನಾಯ್ಕ. 'ಆದ್ರೆ ಒಂದು ಹೌದು, ಅವನ ಕೆಲಸ ಅಂದ್ರೆ ಕೆಲಸ. ಎಷ್ಟು ಚಂದ ಮಾಡಿದಾನೆ ಅಂತೀ? ನಮ್ಮ ಸೀಮೆ ದೇವಸ್ಥಾನದಲ್ಲಿ ಕಲ್ಲಲ್ಲಿ ಕಡೆದಿಟ್ಟಿದಾರಲ್ಲ ಹಾಗೆ ಥೇಟು ಹಾಗೆ ಕಾಣತದೆ ಕಣೆ!' ಮೆಚ್ಚಿಕೊಂಡು ಅದನ್ನ ಮನಸಲ್ಲಿ ಮೂಡಿಸಿಕೊಳ್ಳತೊಡಗಿದ ಬೀರಪ್ಪ ನಾಯ್ಕ.

ಇವರು ಕಣೆ ಸ್ಥಾಪಿಸಿ ಆಲೆಮನೆಗೆ ಒಂದು ರೂಪ ಕೊಡುತ್ತಿರುವಂತೆ ಏನೋ ನೆಪ ಮಾಡಿಕೊಂಡು ಜನ ಅತ್ತ ಸುಳಿಯುವುದು ಸುರುವಾಯ್ತು. ಮರದ ಗಾಣವನ್ನು ಅದ್ಭುತವೆಂಬಂತೆ ನೋಡಿದರು. ಅಲ್ಲ, ಇದು ಕಬ್ಬಿಣದಂತೆ ತಡಕೋತದೊ ಅಂತ ಅನುಮಾನ ಪಟ್ಟವರಿಗೆ ಮೊದಲೆಲ್ಲ ಎಣ್ಣೇಗಾಣ ಮರದ್ದೆ ಅಲ್ವ ಇದ್ದದ್ದು? ಅದೆಲ್ಲ ಯಾಕೆ, ಮಹಾರಾಷ್ಟ್ರದ ಎಷ್ಟೋ ಕಡೆ ಈಗಲೂ ಉಪಯೋಗಿಸ್ತಾರೆ ಅಂತ ಸಮರ್ಥಿಸಿ ತಮ್ಮ ತಿಳಿವಳಿಕೆಯನ್ನು ಪ್ರದರ್ಶಿಸಿಕೊಂಡರು ಕೆಲವರು. ನಕ್ಷತ್ರ ನೋಡಿಟ್ಟುಕೊಂಡಿದ್ದ ರಾಮಣ್ಣ ಕಾಯಿ ಒಡೆದು, ಕುಂಕುಮ ಹಚ್ಚಿ ಗಣಪತಿ ಪೂಜೆ ಮಾಡಿ ಮುಗಿಸುತ್ತಿದ್ದಂತೆ 'ಓ... ಆಲೇಗಾಣಾ... ಓತಿಲ್ಯೋ... ಓಓಓ' ಅಂತ ರಾಗ ತೆಗೆದ ಬೈರ ದೊಡ್ಡ ಸ್ವರದಲ್ಲಿ ಕೋಣವನ್ನು ನಡೆಸಿದ. ಸ್ವತಃ ತನ್ನನ್ನು ನೇಮಿಸಿಕೊಂಡು ಆಗಲೆ ಗಾಣದೆದುರು ಕುಳಿತಿದ್ದ ಮುತ್ತಾಚಾರಿ ಕಬ್ಬನ್ನು ಗಾಣಕ್ಕೆ ಕೊಡತೊಡಗಿದ. ಆಗಷ್ಟೆ ಕಡಿದ ತಾಜಾ ಕಬ್ಬು ಕಣೆಗಳ ನಡುವೆ ಒಡೆದು ಹಿಂಡಿಕೊಳ್ಳುತ್ತ ಹಸಿರು ರಸ ಬಾನಿಯಲ್ಲಿ 'ಜೊರ್ರ್' ಸದ್ದಿನಲ್ಲಿ ಬೀಳತೊಡಗಿ ಇಷ್ಟು ದಿನದ ಪ್ರಯತ್ನವೆಲ್ಲ ಒಂದು ಲಯದ ಹಿಡಿತಕ್ಕು, ಶ್ರುತಿಗು ಸೇರಿದಂತಾಗಿ ಎಲ್ಲ ಧನ್ಯತೆಯನ್ನನುಭವಿಸತೊಡಗಿದರು. ಮರದ ಗಾಣವಾಗಿದ್ದಕ್ಕೆ ಎರಡೆರಡೇ ಕಬ್ಬು ಕೊಡಬೇಕಾಗ್ತದೇನೊ, ದಿನಕ್ಕೆ ಎರಡೇ ಎಸರಾಗ್ತದೇನೊ